ಸಾಕ್ಷಿಯ ಹೆಸರುಃ ಪ್ರಶಾಂತ್ ಎಸ್

ದಿನಾಂಕ 14-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ ಕೆ ಎಸ್ ಎಂ ಪಿ ವಕೀಲರಿಂದ,

1) ಸರ್ವೆ ನಂ.27/5 ಎ 1 ಮತ್ತು 27/5 ಎ 2 ರ ಮೂಲ ಸರ್ವೆ ನಂ. 27/5 ಇದೆ ಎಂದರೆ ಸಾಕ್ಷಿ ಅದೆ ಇರುತ್ತದೆ ಎಂದು ನಂಬಿರುತ್ತೇನೆ ಎನ್ನುತ್ತಾರೆ. ನಿಪಿ 2 ರ ಪ್ರಕಾರ ದಾವಾ ಷಡ್ಯೂಲ್ ಸ್ವತ್ತುಗಳನ್ನು ಸಿ ಮುದ್ದಪ್ಪ ರವರು ಕ್ರಯಕ್ಕೆ ಕೊಂಡಿದ್ದರು ಎಂದರೆ ಸಾಕ್ಷಿ ಅದು ನನಗೆ ಸಂಬಂಧಪಟ್ಟ ವಿಷಯವಲ್ಲದ್ದರಿಂದ ತಿಳಿದುಕೊಂಡಿಲ್ಲ ಎನ್ನುತ್ತಾರೆ. ದಾವಾ ಷಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಹಿನ್ನೆಲೆಯನ್ನು ತಿಳಿದುಕೊಂಡಿರುತ್ತೇನೆ. ಸಿ.ಮುದ್ದಪ್ಪ ಮತ್ತು ಲಿಂಗಪ್ಪ ಃಉಃ ಪುಟ್ಟಸ್ವಾಮಯ್ಯ ರವರು ಅಣ್ಣತಮ್ಮಂದಿರು ಎಂದರೆ ಸರಿ. 1956 ರಲ್ಲಿ ಸಿ ಮುದ್ದಪ್ಪ ಮತ್ತು ಲಿಂಗಪ್ಪ ಃಉಃ ಪುಟ್ಟಸ್ವಾಮಯ್ಯ ಯವರು ಒಂದು ವಿಭಾಗ ಪತ್ರ ಮಾಡಿಕೊಂಡಿರುವ ವಿಷಯ ನನಗೆ ಗೊತ್ತು. ದಿಃ 28-05-1956 ರಲ್ಲಿ ಸದರೀ ವಿಭಾಗ ಪತ್ರ ಆಗಿತ್ತು ಎಂದರೆ ಸರಿ.

2) ಈ ವಿಭಾಗ ಪತ್ರ ಆದ ಎರಡು ದಿನಗಳ ನಂತರ ಅಂದರೆ ದಿಃ 30-05-1956 ಈ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಿಪಿ 3 ರಂತೆ ಒಂದು ಕರಾರು ಪತ್ರ ಆಗಿತ್ತು ಎಂದರೆ ಸಾಕ್ಷಿ ಆಗಿತ್ತು ಆದರೆ ಅದರ ಒಕ್ಕಣಿಕೆಗಳು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿಃ 28-05-1956 ರಲ್ಲಿ ಮಾಡಿಕೊಂಡ ವಿಭಾಗ ಪತ್ರ ಹಾಗೂ ನಿಪಿ 3 ರಲ್ಲಿ ಮಾಡಿಕೊಂಡ ಕರಾರು ಪತ್ರದ ಪ್ರಕಾರ ಸರ್ವೆ ನಂ. 27/5 ರಲ್ಲಿ ಸಿ ಲಿಂಗಪ್ಪ ನವರಿಗೆ 12 ಗುಂಟೆ ಜಮೀನು ಮತ್ತು ಉಳಿಕೆ ಜಮೀನು ಮುದ್ದಪ್ಪ ರವರಿಗೆ ಹಿಸ್ಸೆ ಆಗಿತ್ತು ಎಂದರೆ ಸಾಕ್ಷಿ ಲಿಂಗಪ್ಪ ಃಉಃ ಪುಟ್ಟಪ್ಪ ರವರಿಗೆ 24 ಗುಂಟೆ ಜಮೀನು ಬಂದಿತ್ತು ಎನ್ನುತ್ತಾರೆ. ಸರ್ವೆ

ನಂ. 27/5 ಪೋಡಾದ ನಂತರ ಸರ್ವೆ ನಂ 27/5 ಎ 1 ಮತ್ತು 27/5 ಎ 2 ಎಂದು ಆಗಿದೆ ಎಂದರೆ ಸರಿ.

3) ಸರ್ವೆ ನಂ 27/5 ಎ 1 ರಲ್ಲಿ ಒಂದು ವಾಸದ ಮನೆ ಇದೆ ಎಂದರೆ ನಿಜ. ದಾವಾ ಸ್ವತ್ತು ಸಂಪೂರ್ಣವಾಗಿ ಲಿಂಗಪ್ಪ ನವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಲಿಂಗಪ್ಪ ನವರಿಗೆ ನಂಜಮ್ಮಣಿ ಎಂಬ ಹೆಂಡತಿ ಹಾಗೂ ಐದು ಜನ ಹೆಣ್ಣು ಮಕ್ಕಳು ಇದ್ದರು ಎಂದರೆ ಸರಿ. ಈ ಕೇಸಿನ ವಾದಿ ಸದರೀ ಲಿಂಗಪ್ಪ ನವರ ಐದನೇ ಮಗಳು. ಸಾಕ್ಷಿಗೆ ಈಗ ದಿಃ 12-10-1990 ರಂದು ಪುಟ್ಟಸ್ವಾಮಪ್ಪ ಃಉಃ ಲಿಂಗಪ್ಪ ತೀರಿಕೊಂಡಿರುತ್ತಾರೆ ಎಂದು ಒಂದು ಮರಣ ಪ್ರಮಾಣ ಪತ್ರ ತೋರಿಸಿದಾಗ ಸಾಕ್ಷಿ ಇರಬಹುದು ಎನ್ನುತ್ತಾರೆ. ಸದರೀ ಮರಣ ಪ್ರಮಾಣ ಪತ್ರವನ್ನು ನಿಪಿ 21 ಎಂದು ಗುರುತಿಸಲಾಯಿತು. ಸದರೀ ಲಿಂಗಪ್ಪ ಃಉಃ ಪುಟ್ಟಸ್ವಾಮಪ್ಪ ರವರ ಹೆಂಡತಿ ನಂಜಮ್ಮಣಿ 1983 ರಲ್ಲಿ ತೀರಿಕೊಂಡಿದ್ದರು ಎಂದರೆ ನನಗೆ ಯಾವಾಗ ತೀರಿಕೊಂಡಿದ್ದರು ಎಂದು ನಿಖರವಾದ ಮಾಹಿತಿ ಇಲ್ಲ ಎನ್ನುತ್ತಾರೆ. ಆದರೆ ಅವರು ತೀರಿಕೊಂಡಿರುತ್ತಾರೆ.

4) ಲಿಂಗಪ್ಪ ಃಉಃ ಪುಟ್ಟಸ್ವಾಮಪ್ಪ ರವರಿಗೆ ದಾವಾ ಸ್ವತ್ತುಗಳಲ್ಲದೇ ಬೇರೆ ಸ್ವತ್ತುಗಳು ಇರುವುದಿಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಅವರಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆಯಲು ನನಗೆ ಕಾಲಾವಕಾಶ ಬೇಕು. ಸದರೀ ಲಿಂಗಪ್ಪನವರಿಗೆ ಬೇರೆ ಯಾವ ಸರ್ವೆ ನಂಬರಿನಲ್ಲಿ ಯಾವ ಸ್ಥಳದಲ್ಲಿ ಸ್ವತ್ತುಗಳು ಇವೆ ಎಂದು ನನಗೆ ಗೊತ್ತಿಲ್ಲ. ಲಿಂಗಪ್ಪ ನವರು ತಮ್ಮ ಜೀವಿತಾ ಅವಧಿಯಲ್ಲಿ ದಾವಾ ಷಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ವಿಭಾಗ ಪತ್ರ ವಾಗಿರುವುದಿಲ್ಲ ಎಂದರೆ ಸಾಕ್ಷಿ ಆಗಿದೆ ಅದಕ್ಕೆ ಸಂಬಂಧಪಟ್ಟ ದಾಖಲೆ ಕಳೆದು ಹೋಗಿದೆ ಎನ್ನುತ್ತಾರೆ. ನಾನು ಆ ವಿಭಾಗ ಪತ್ರವನ್ನು ನೋಡಿರುತ್ತೇನೆ. ಆ ವಿಭಾಗ ಪತ್ರ ಯಾವ ವರ್ಷ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆ ವಿಭಾಗ ಪತ್ರ ಆಗಿತ್ತು

ಎಂಬುದರ ಬಗ್ಗೆ ಮಾಹಿತಿಯನ್ನು ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎನ್ನುತ್ತಾರೆ.

5) ಆ ರೀತಿ ಯಾವುದೇ ವಿಭಾಗ ಪತ್ರ ಆಗದೇ ಇರುವ ಕಾರಣ ನಾನು ಆ ವಿಷಯವನ್ನು ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸುಳ್ಳು. ದಾವಾ ಷಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಲಿಂಗಪ್ಪ ರವರು ಪ್ರತಿವಾದಿಗಳಿಗೆ ಯಾವುದೇ ನೊಂದಾಯಿತ ದಾಖಲೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತಿನ ಜಂಟಿ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸುಳ್ಳು. ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತಿನ ಜಂಟಿ ಸ್ವಾಧೀನವನ್ನು ಹೊಂದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6) ಸರ್ವೆ ನಂ. 145/3 ರಲ್ಲಿನ ಸ್ವತ್ತು ವಾದಿಗೆ ಲಿಂಗಪ್ಪ ಃಉಃ ಪುಟ್ಟಸ್ವಾಮಪ್ಪರವರ ವಿಭಾಗದ ಮೂಲಕ ಬಂದಿರುತ್ತದೆ. ನಿಡಿ 5 ರ ಪ್ರಕಾರ ವಾದಿಗೆ ವಿಭಾಗದ ಮೂಲಕ ಬಂದಿರುವ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಈ ಸ್ವತ್ತು ಲಿಂಗಪ್ಪ ನವರ ಜೀವಿತಾವಧಿಯಲ್ಲಿ ವಾದಿಗೆ ಮಾಡಿದ ನೊಂದಾಯಿತ ದಾನ ಪತ್ರದ ಮೂಲಕ ಬಂದ ಸ್ವತ್ತು ಎಂದರೆ ಸಾಕ್ಷಿ ವಿಭಾಗದ ಅಂಗವಾಗಿ ಬಂದಿತ್ತು ಎನ್ನುತ್ತಾರೆ. ಈ ಜಮೀನುಗಳ ಅಕ್ಕಪಕ್ಕದಲ್ಲಿ ನಿಮ್ಮ ತಾಯಿಗೆ ಮತ್ತು ಲಿಂಗಪ್ಪ ನವರ ಇತರೆ ಹೆಣ್ಣುಮಕ್ಕಳಿಗೆ ಲಿಂಗಪ್ಪನವರು ಜಮೀನುಗಳನ್ನು ದಾನಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸಾಕ್ಷಿ ದಾಖಲೆ ನೋಡಿ ಹೇಳಬೇಕು ಎನ್ನುತ್ತಾರೆ. ನಮ್ಮ ತಾಯಿಗೆ ಬಂದ ಸ್ವತ್ತಿನ ಸ್ವಾಧೀನದಲ್ಲಿ ನಮ್ಮ ತಾಯಿ ಇದ್ದಾರೆ. ನನ್ನ ತಾಯಿಗೆ ಸರ್ವೆ ನಂ. 27/5 ಎ 1 ಮತ್ತು 27/5 ಎ 2 ರಲ್ಲಿ ಸ್ವತ್ತು ಇದೆ. ನನ್ನ ತಾಯಿಗೆ ಸರ್ವೆ ನಂ. 27/5 ಎ 1 ಮತ್ತು 27/5 ಎ 2 ರಲ್ಲಿ ಸ್ವತ್ತು

ದಾನ ಪತ್ರ ಮೂಲಕ ಬಂದ ಸ್ವತ್ತು ಅಲ್ಲ ಅದು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ.

7) ಸರ್ವೆ ನಂ. 145/3 ರ ಪಕ್ಕದಲ್ಲಿ ನಮ್ಮ ತಾಯಿಗೆ ಜಮೀನು ಎಂದರೆ ಸಾಕ್ಷಿ ಇರಬಹುದು ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ. 145/3 ಪಕ್ಕದಲ್ಲಿ ಐದು ಜನ ಹೆಣ್ಣು ಮಕ್ಕಳಿಗೆ ಜಮೀನು ಕೊಟ್ಟಿದ್ದಾರೆ ಎಂದರೆ ಸರಿ. ದಾವಾ ಷಡ್ಯೂಲ್ ಸ್ವತ್ತುಗಳು ಸರ್ವೆ ನಂ. 145/3 ರ ಪಕ್ಕದಲ್ಲಿ ಇಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.